1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2794/2016

ಚಾಸಾ: 2 ಪ್ರಾಸಾ:2

ದಿನಾಂಕ: 03.07.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಜಯಂತಿ |
| ಗಂಡನ ಹೆಸರು | : | ಪ್ರಭಾಕರ |
| ವಯಸ್ಸು | : | 74 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕುಂಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಚಾಸಾ-1 ರವರು ನನ್ನ ಮಗಳು. ರಮೇಶರವರ ತಾಯಿ ರಾಜಮ್ಮ, ಅಕ್ಕ ಸುಶೀಲ, ಅಕ್ಕನ ಮಗಳು ಗಿರಿಜಾರವರು 2005 ನೇ ಇಸವಿಯಲ್ಲಿ ಚಾಸಾ-1 ರವರನ್ನು ನೋಡಲು ಬಂದಿರುತ್ತಾರೆ. ಅವರು ಬಂದಾಗ ರೂಪಾಯಿ 5 ಲಕ್ಷ ಹಣ ಹಾಗೂ 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿದ್ದರು. ಅದಕ್ಕೆ ನಾವು ಆಗುವುದಿಲ್ಲವೆಂದು ನಿರಾಕರಿಸಿರುತ್ತೇವೆ. ಮದುವೆ ತಪ್ಪುತ್ತದೆ ಎಂದು 2 ಲಕ್ಷ ಹಾಗೂ 20 ಪವನ್ ಚಿನ್ನಕ್ಕೆ ಒಪ್ಪಿ ಕೊಂಡಿರುತ್ತೇವೆ. ನಮ್ಮ ಕಡೆಯಿಂದ ನಾನು, ಚಾಸಾ-3 ರಿಂದ 5 ರವರು ಇದ್ದೇವು.

ದಿ: 18-11-2005 ರಂದು ಕೊಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಸಾ-1 ಮತ್ತು 1ನೇ ಆರೋಪಿಯ ವಿವಾಹವಾಗಿರುತ್ತದೆ. ಆರೋಪಿತರು ನಿಶ್ಚಿತಾರ್ಥದ ಒಂದು ವಾರದ ಮೊದಲೇ ಬಂದು ಸದ್ರಿ ರೂಪಾಯಿ 2ಲಕ್ಷ ಹಣವನ್ನು ತೆಗೆದುಕೊಂಡು ಹೋಗಿದ್ದರು. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಒಂದು ನೆಕ್ಲೇಸು, 7 ಬಳೆಗಳು, ಕಿವಿ ಮತ್ತು ಕೈ ಉಂಗುರುಗಳು ಒಟ್ಟು ಹೀಗೆ 24 ಪವನ್ ಚಿನ್ನವನ್ನು ಹಾಕಿರುತ್ತೇವೆ. 1ನೇ ಆರೋಪಿಗೆ ಚೈನು, ಬ್ರಾಸ್ಲೇಟು, ಉಂಗುರು, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟಿರುತ್ತೇವೆ.

ಮದುವೆಯಾದ ನಂತರ ಬೆಂಗಳೂರಿಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಜಾಸ್ತಿ ವರದಕ್ಷಿಣೆ ತರಲಿಲ್ಲ ಎಂದು ಆರೋಪಿಗಳು ಚಾಸಾ-

1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ 1ನೇ ಆರೋಪಿಯ ತಮ್ಮ ಲೊಕೇಶ್ ಸಹ ಬಂದು ಬೈಯುತ್ತಿದ್ದರು. ಒಂದು ದಿನ ಆರೋಪಿತರು ಇದ್ದ ಸಮಯದಲ್ಲಿ ಲೊಕೇಶ್ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ಹೋಗಿರುತ್ತಾರೆ. ಆಗ 1ನೇ ಆರೋಪಿ ಏನನ್ನೂ ಮಾತನಾಡಿರುವುದಿಲ್ಲ. ಚಾಸಾ-1ರವರು 1ನೇ ಆರೋಪಿಯ ತಾಯಿಯ ಹತ್ತಿರ ಕೇಳಿದಾಗ ಅವರು ಆತನು ಮದ್ಯಪಾನ ಮಾಡಿ ಬಂದು ಹೊಡೆಯುತ್ತಾನೆ ಏನು ಮಾಡಬೇಕಾಗುತ್ತೇ ನೀನೇ ಸುಧಾರಿಸಿಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ನಿಮ್ಮ ಮನೆಯವರು ಸರಿ ಇಲ್ಲ ಎಂದು ಹೀಯಾಳಿಸುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು.

ಆ ಸಮಯದಲ್ಲಿ ಚಾಸಾ-1 ರವರು New Horizon Collegeನಲ್ಲಿ ಲ್ಯಾಬ್ Instructor ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ರವರು ATM and Debit Card ಗಳನ್ನು ಆರೋಪಿ ಇಟ್ಟುಕೊಂಡು ಹಣವನ್ನು ಪಡೆಯುತ್ತಿದ್ದರು. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಕೂಡ ಅವರ ಬಗ್ಗೆ ಗಮನ ಹರಿಸುತ್ತಿದ್ದರಲಿಲ್ಲ. ಚಾಸಾ-1 ರವರಿಗೆ ಶಸ್ತ್ರಚಿಕಿತ್ಸೆ ಆಗಿದ್ದಾಗ ನನ್ನ 2ನೇ ಮಗ ಎಲ್ಲಾ ಖರ್ಚುಗಳನ್ನು ಭರಿಸಿರುತ್ತಾರೆ. ಚಾಸಾ-1 ರವರಿಗೆ ಯಾವಾಗಲೂ ಆರೋಗ್ಯ ಸರಿ ಇಲ್ಲದೆ ಇದ್ದಾಗ ಚಿಕಿತ್ಸೆ ಕೊಡಿಸಿರುವುದಿಲ್ಲ.

ಚಾಸಾ-1ರವರಿಗೆ ಸಂಬಂಧಪಟ್ಟ ಚೆಕ್ಕು ಪುಸ್ತಕವನ್ನು 1ನೇ ಆರೋಪಿಯೇ ಇಟ್ಟು ಕೊಂಡು 4-5 ಚೆಕ್ಕುಗಳಿಗೆ ಸಹಿಯನ್ನು ಪಡೆದು ದಾಖಲೆಗಳನ್ನು ಫೋರ್ಜರಿ ಮಾಡಿರುತ್ತಾರೆ. ಇದರಿಂದಾಗಿ ಶಿಖಾರಿಪುರ ನ್ಯಾಯಾಲಯದಲ್ಲಿ ಚೆಕ್ಕು ಬೌನ್ಸ್ ಸಹ ಚಾಸಾ-1 ರವರ ವಿರುದ್ದ ಹಾಕಿದ್ದರು. ಚಾಸಾ-1 ರವರಿಗೆ ಆ ಬಗ್ಗೆ ಏನೂ ಗೊತ್ತಿದ್ದಿರಲಿಲ್ಲ. ಪುನಃ ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಆರೋಪಿಗಳು ಅವರನ್ನು ನೋಡಿಕೊಂಡಿರುವುದಿಲ್ಲ ಆ ಕಾರಣ ಚಾಸಾ-1 ರವರು ತನ್ನ ಸಹೋದರ ಕಿರಣ್ ರವರಿಗೆ ತಿಳಿಸಿದ್ದು ಅದರಂತೆ ಸದ್ರಿ ಕಿರಣ್ ರವರು ಚಾಸಾ-1 ರವರನ್ನು ಕುಂದಾಪುರಕ್ಕೆ ಕರೆದುಕೊಂಡು ಬಂದಿದ್ದರು. ಇಲ್ಲಿ ತೋರಿಸಿದಾಗ ಚಾಸಾ-1ರವರು ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಆ ವಿಚಾರವನ್ನು ಚಾಸಾ-1 ರವರು ಆರೋಪಿಗೆ ತಿಳಿಸಿದಾಗ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ.

ದಿಃ 27-12-2013 ರಂದು ಚಾಸಾ-1ರವರು ಗಂಡು ಮಗುವಿಗೆ ಜನ್ಮ ನೀಡಿದ್ದು ಸದ್ರಿ ವಿಚಾರವನ್ನು 1ನೇ ಆರೋಪಿಗೆ ತಿಳಿಸಿರುತ್ತಾರೆ. ಅನಂತರ ಚಾಸಾ-1 ರವರನ್ನು ನೋಡಲು ಬಂದಿದ್ದು ಆದರೆ 1ನೇ ಆರೋಪಿ ಯಾವುದೇ ಖರ್ಚನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ಕುಂದಾಪುರಕ್ಕೆ

ಬರುವ ಸಮಯದಲ್ಲಿ 1ನೇ ಆರೋಪಿ ನೀನು ಪುನಃ ನಮ್ಮ ಮನೆಗೆ ಬರಬೇಡ ನಿನಗೆ ವಿಚ್ಛೇಧನೆ ಕೊಡುತ್ತೇನೆ ಎಂದು ಹೇಳಿದ್ದನು.

1ನೇ ಆರೋಪಿಯ ಮಾವ ಮುಕುಂದ ಎಂಬುವರು ರಾಜಿ ಮಾಡಿಕೊಂಡು ಮಗುವಿನ ನಾಮಕರಣಕ್ಕೆ ಕರೆದುಕೊಂಡು ಬಂದಿದ್ದರು. ಮಗನಿಗೆ ಪ್ರಸಿದ್ದ್ ಎಂದು ಹೆಸರು ಇಟ್ಟಿರುತ್ತಾರೆ. ಮುಕುಂದ ಜೀವಂತ ಇದ್ದಾಗ 2-3 ಬಾರಿ ರಾಜಿ ಪಂಚಾಯಿತಿ ಮಾಡಿದ್ದರು. ಆದರೆ 1ನೇ ಆರೋಪಿ ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾರೆ. ಅನಂತರ ಮುಕುಂದರವರು ಮರಣ ಹೊಂದಿರುತ್ತಾರೆ. ಚಾಸಾ-1 ರವರನ್ನು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ. ಪದೇ ಪದೇ ಚಾಸಾ-1 ರವರಿಗೆ ಹಣ ತೆಗೆದುಕೊಂಡು ಬಾ ಎಂದು ಪೀಡಿಸುತ್ತಿದ್ದರು.

ಚಾಸಾ-1ರವರು ಸಾಕಷ್ಟು ಸಹಿಸಿಕೊಂಡಿದ್ದು ಅನಂತರ ಸಹಿಸಿಕೊಳ್ಳಲಾಗದೆ ದಿಃ 26-04-2016 ರಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೂ ಮಗುವನ್ನು ನೋಡಿಕೊಂಡಿರುವುದಿಲ್ಲ.

ಈಗ ಸಾಕ್ಷಿಗೆ ನಿಪಿ-3 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-4 ಮತ್ತು 5 ನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಸದ್ರಿ ಸಹಿಯನ್ನು ದಿಃ 15-06-2016ರಂದು ಆರೋಪಿಯ ಮನೆಯಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-1 ಮತ್ತು 12 ರವರು ಹಾಜರು ಇದ್ದರು. ಮಧ್ಯಾಹ್ನ 12-15 ರಿಂದ 1 ಗಂಟೆಯವರೆಗೂ ಪಂಚನಾಮೆ ಜರುಗಿಸಿ ಫೋಟೋ ತೆಗೆದಿರುತ್ತಾರೆ.

ಮದುವೆಯಾದ ಸ್ವಲ್ಪ ದಿನಗಳ ನಂತರ 1ನೇ ಆರೋಪಿಯು ಚಾಸಾ-1ರವರ ಒಡವೆಗಳನ್ನು ಮುತ್ತೂಟು ಫೈನಾನ್ಸ್ ನಲ್ಲಿ ಅಡಮಾನ ಇಟ್ಟಿದ್ದರು. ಆರೋಪಿಯು ಪೂರ್ತಿ ಚಿನ್ನವನ್ನು ಆತನೇ ತೆಗೆದುಕೊಂಡಿರುತ್ತಾನೆ. ಹಣವನ್ನು ವಾಪಸ್ಸು ಕೊಟ್ಟಿರುವುದಿಲ್ಲ. ಆರೋಪಿಗಳು ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಚಿತ್ರ ಹಿಂಸೆ ನೀಡಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ**

ನಿಮಗೆ ಒಟ್ಟು ಜನ ಹೆಣ್ಣು ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಚಾಸಾ-1 ಮತ್ತು ಚಾಸಾ-12 ಎಂದು ನುಡಿಯುತ್ತಾರೆ. ಚಾಸಾ-12 ರವರ ವಿವಾಹವು ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿ ಸರಿಯಾಗಿ ನೆನಪಿರುವುದಿಲ್ಲ ಆದರೆ 1996 ಇರಬಹುದು ಎಂದು ನುಡಿಯುತ್ತಾರೆ. ಚಾಸಾ-

12ರವರಿಗೂ ಸಹ ವಿಚ್ಛೇಧನೆ ಆಗಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-12 ರವರು ಸಹ ಅವರ ಯಜಮಾನರು ಹಾಗೂ ಅವರ ಮನೆಯವರು ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ದೂರನ್ನು ದಾಖಲಿಸಿ ಹಣ ಪಡೆದಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಚಾಸಾ-1 ರವರು ಮತ್ತು ಆಕೆಯ ಮಗ ಈಗ ಎಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಚಾಸಾ-1 ರವರು ಕುಂದಾಪುರದಲ್ಲಿ ಹಾಗೂ ಅವರ ಮಗ ಬೆಂಗಳೂರಿನಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರು 2017 ರಲ್ಲಿ 1ನೇ ಆರೋಪಿಗೆ ಕುಂದಾಪುರದಲ್ಲಿ ವಿವಾಹ ವಿಚ್ಛೇಧನ ಅರ್ಜಿ ಸಲ್ಲಿಸಿ ಏಕಪಕ್ಷೀಯವಾಗಿ ಆದೇಶ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮದುವೆ ಮಾತುಕತೆ ಎಲ್ಲಿ ಮಾಡಿದ್ದು ಎಂದರೆ ಸಾಕ್ಷಿ ಕುಂದಾಪುರದ ನಮ್ಮ ಮನೆಯಲ್ಲಿ ಎಂದು ನುಡಿಯುತ್ತಾರೆ. ಮಾತುಕತೆ ಮಾಡುವ ಸಮಯದಲ್ಲಿ ನಿಮ್ಮ ಮನೆಯವರನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ಯಾರು ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ಮದುವೆ ಪೂರ್ವದಲ್ಲಿ ಆರೋಪಿಗಳು ನಿಮ್ಮ ಮನೆಗೆ ಎಷ್ಟು ಬಾರಿ ಬಂದಿದ್ದರು ಎಂದರೆ ಸಾಕ್ಷಿ 2-3 ಬಾರಿ ಎಂದು ನುಡಿಯುತ್ತಾರೆ. ಯಾವ ದಿನಾಂಕ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಶ್ಚಿತಾರ್ಥ ಎಲ್ಲಿ ಮತ್ತು ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿ ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ದಿಃ 14-08-2005 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಿಶ್ಚಿತಾರ್ಥವು ಬೆಂಗಳೂರಿನಲ್ಲಿ ಆಗಿದ್ದು ಎಂದು ನುಡಿಯುತ್ತಾರೆ. ರೂಪಾಯಿ 2 ಲಕ್ಷ ಹಣ ಮತ್ತು 20 ಪವನ್ ಚಿನ್ನವನ್ನು ಆರೋಪಿಗೆ ಯಾವಾಗ ನೀಡಿರುತ್ತೀರಿ ಎಂದರೆ ಸಾಕ್ಷಿ ನಿಶ್ಚಿತಾರ್ಥದ ಒಂದು ವಾರದ ಮೊದಲು ಎಂದು ನುಡಿಯುತ್ತಾರೆ. ಹಣವನ್ನು ಕೊಡುವಾಗ ಅಕ್ಕಪಕ್ಕದವರು ಯಾರಾದರೂ ಇದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದ್ರಿ ದಿನ ಹಣ ಮಾತ್ರ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಮಾತುಕತೆ ಮಾಡಿದ್ದು ಯಾರು ಎಂದರೆ ಸಾಕ್ಷಿ ಬ್ರೋಕರ್ ಗೋಪಾಲಕೃಷ್ಣ ಎಂದು ನುಡಿಯುತ್ತಾರೆ. ಹಣ ಕೊಡುವ ಸಮಯದಲ್ಲಿ ಸದ್ರಿ ಗೋಪಾಲಕೃಷ್ಣ ಇದ್ದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹಣವನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ 2ನೇ ಮಗ ಕಿರಣ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಣ ಕೊಡುವ ಸಮಯದಲ್ಲಿ ಪೋಟೋ ಅಥವಾ ವೀಡಿಯೋ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮನೆಯ ಆಸುಪಾಸು ತುಂಬಾ ಮನೆಗಳು ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2-3 ಬಾರಿ ಆರೋಪಿತರು

ಬಂದಿದ್ದರು ಎಂದು ಹೇಳಿದ್ದು ಅವರ ಮನೆಯ ಎಲ್ಲಾ ಸದಸ್ಯರು ಬಂದಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಮಗಳ ಮದುವೆಗೆ ಚಿನ್ನ ಹಾಕುವುದು ವಾಡಿಕೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಚಿನ್ನವನ್ನು ಖುಷಿಯಿಂದ ಮಗಳಿಗೆ ಹಾಕುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮದುವೆಯಾದ ಎಷ್ಟು ಸಮಯದೊಳಗೆ ಬೆಂಗಳೂರಿಗೆ ಹೋಗಿರುತ್ತಾರೆ ಎಂದರೆ ಸಾಕ್ಷಿ 1 ವಾರದೊಳಗೆ ಎಂದು ನುಡಿಯುತ್ತಾರೆ. ಎಷ್ಟು ಸಮಯ ನಿಮ್ಮ ಮಗಳನ್ನು ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸಾಕ್ಷಿ 3 ತಿಂಗಳು ಇರಬಹುದು ಎಂದು ನುಡಿಯುತ್ತಾರೆ. ನಿಮ್ಮ ಮಗಳಿಗೆ ತೊಂದರೆ ಕೊಡುತ್ತಿದ್ದಾರೆ ಎಂಬ ವಿಚಾರವನ್ನು ನಿಮ್ಮ ಮಗಳು ಮದುವೆಯಾದ ಎಷ್ಟು ಸಮಯದ ನಂತರ ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ದಿಃ 18-05-2013 ರಂದು ಎಂದು ನುಡಿಯುತ್ತಾರೆ. 2005 ರಿಂದ 2013ರವರೆಗೂ ಚಾಸಾ-1 ರವರು ನಿಮ್ಮ ಮನೆಗೆ ಬಂದಿರುವುದಿಲ್ಲವಾ ಎಂದರೆ ಸಾಕ್ಷಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ ಸುಮಾರು ಬಾರಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ 1ನೇ ಆರೋಪಿ ಚಾಸಾ-1 ರವರಿಗೆ ಹಿಂಸೆ ಕೊಟ್ಟ ಬಗ್ಗೆ ಹೇಳಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಗಂಡು ಮಕ್ಕಳು ಅಂದರೆ ಚಾಸಾ-3 ಮತ್ತು 4 ರವರು ಬೆಂಗಳೂರಿನಲ್ಲಿ ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-3 ಮತ್ತು 4 ರವರಿಗೆ 1ನೇ ಆರೋಪಿ ಚಾಸಾ-1 ರವರಿಗೆ ತೊಂದರೆ ಕೊಟ್ಟ ಬಗ್ಗೆ ಚಾಸಾ-1 ರವರು ಹೇಳಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳನ್ನು 2013ರಲ್ಲಿ ನಿಮ್ಮ ಮಗಳು ನಿಮಗೆ ತಿಳಿಸಿದ್ದರಿಂದ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತ್ರಾರೆ. ನೀವು 1ನೇ ಆರೋಪಿಯ ಮನೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ಬಾರಿ ಹೋಗಿರುತ್ತೀರಿ ಎಂದರೆ ಸಾಕ್ಷಿ 2 ಬಾರಿ ಎಂದು ನುಡಿಯುತ್ತಾರೆ. 1ನೇ ಆರೋಪಿಯ ಮನೆಗೆ ಉಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಚಾಸಾ-1 ರವರು ಆರೋಪಿ ಹಿಂಸೆ ಕೊಡುತ್ತಿದ್ದ ಬಗ್ಗೆ, ಚೆಕ್ಕನ್ನು ದುರಪಯೋಗಪಡಿಸಿಕೊಂಡ ಬಗ್ಗೆ ಹಾಗೂ ಚಿಕಿತ್ಸೆ ಕೊಡಿಸದ ಬಗ್ಗೆ ಹೇಳಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

1ನೇ ಆರೋಪಿ ಮದುವೆಯಾದ ನಂತರ ನಿಮ್ಮ ಊರಿಗೆ ಬಂದಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 1ನೇ ಆರೋಪಿ ಒಟ್ಟಿಗೆ ಬರುತ್ತಿದ್ದರಾ ಎಂದರೆ ಸಾಕ್ಷಿ

ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಚಾಸಾ-1 ರವರಿಗೆ ಹೆಚ್ಚಿ ನ ವರದಕ್ಷಿಣೆ ಕೇಳಿದ ಬಗ್ಗೆ ಹಾಗೂ ಹಿಂಸೆ ನೀಡಿದ ಬಗ್ಗೆ ಮತ್ತು 1ನೇ ಆರೋಪಿಯ ತಮ್ಮ ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದ ಬಗ್ಗೆ ನೀವು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ, ಚಾಸಾ-1 ರವರು ನಿಮಗೆ ಹೇಳಿದ ಮೇರೆಗೆ ನೀವು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಆರೋಪಿ ಮತ್ತು ಚಾಸಾ-1 ರವರು ಫ್ಲಾಟ್ ನಲ್ಲಿ ವಾಸ ಇದ್ದರಾ ಅಥವಾ ಪ್ರತ್ಯೇಕ ಮನೆಯಲ್ಲಿ ವಾಸ ಇದ್ದರಾ ಎಂದರೆ ಸಾಕ್ಷಿ ಸ್ವಂತ ಮನೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ಆರೋಪಿಗಳ ಮನೆಯ ಅಕ್ಕ ಪಕ್ಕ ಬೇರೆ ಮನೆಗಳು ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವಾಗಲೀ, ಚಾಸಾ-1 ರವರಾಗಲೀ ಮತ್ತು ನಿಮ್ಮ ಮನೆಯವರಾಗಲೀ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದನ್ನು ಸಲ್ಲಿಸುವ ಮೊದಲು ಕುಂದಾಪುರದಲ್ಲಿ ಆಗಲೀ ಅಥವಾ ಬೆಂಗಳೂರಿನಲ್ಲಿ ಆಗಲೀ ಯಾವುದೇ ಪೋಲಿಸ್ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಚಾಸಾ-1 ರವರು ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸಾಕ್ಷಿ Diploma Engineer ಎಂದು ನುಡಿಯುತ್ತಾರೆ. ಪೊಲೀಸ್ ದೂರನ್ನು ಕೊಡಲು ತೊಂದರೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಮರ್ಯಾದೆ ಹೋಗುತ್ತದೆ ಎಂಬ ಕಾರಣದಿಂದ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಖಾಸಗಿ ದೂರನ್ನು ಸಲ್ಲಿಸಿದ ನಂತರ ಪೊಲೀಸರು ನೀವು ಇರುವ ನಿಮ್ಮ ಮನೆಗೆ ಬಂದಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬೆಂಗಳೂರಿಗೆ ನಿಮ್ಮನ್ನು ಪೊಲೀಸರು ಕರೆದುಕೊಂಡು ಹೋಗಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಆರೋಪಿಗಳ ಮನೆಗೆ ಹೋದ ಸಮಯದಲ್ಲಿ ಮನೆ ಬೀಗ ಹಾಕಿತ್ತಾ ಅಥವಾ ತೆರೆದಿತ್ತಾ ಎಂದರೆ ಸಾಕ್ಷಿ ಓಪನ್ ಇರಲಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ಸಹಿಯನ್ನು ಮನೆಯ ಹೊರಗಡೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಬಾಗಿಲಿನ ಹೊರಗಡೆ ಎಂದು ನುಡಿಯುತ್ತಾರೆ.

ನೀವು ಸಹಿ ಮಾಡುವ ಸಮಯದಲ್ಲಿ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರಾದರೂ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿರುವ ದಾಖಲೆಯಲ್ಲಿ ಏನೆಲ್ಲಾ ಬರೆದಿದೆ ಎಂದು ನೀವು ಓದಿ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1ರವರು ಸದ್ರಿ ದಿನ ಮನೆಯ ಒಳಗೆ ಹೋಗಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ 1ನೇ ಆರೋಪಿ ಚಾಸಾ-1 ರವರಿಗೆ ಮನೆಯ ಯಾವ

ಭಾಗದಲ್ಲಿ ಹಿಂಸೆ ಮಾಡಿರುತ್ತಾರೆ ಎಂಬುವುದರ ಬಗ್ಗೆ ವಿಚಾರಣೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಕುಂದಾಪುರದ ಠಾಣೆಗೆ ಎಷ್ಟು ಬಾರಿ ಹೋಗಿರುತ್ತೀರಿ ಎಂದರೆ ಸಾಕ್ಷಿ 2 ಬಾರಿ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ಎಷ್ಟು ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಒಂದು ಸಹಿ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಲಾಗಿ ಸದ್ರಿ ಸಹಿಯನ್ನು ನೀವು ಕುಂದಾಪುರ ಠಾಣೆಯಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪೊಲೀಸರು ನಿಮ್ಮನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವಾಗ ಎಂದರೆ ಸಾಕ್ಷಿ ಪಿರ್ಯಾದು ಕೊಟ್ಟ ದಿವಸ ಎಂದು ನುಡಿಯುತ್ತಾರೆ. ಎಲ್ಲಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

1ನೇ ಆರೋಪಿ ತಮ್ಮ ಆದಾಯಕ್ಕೆ ಅನುಗುಣವಾಗಿ ಚಾಸಾ-1ರವರನ್ನು ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1ರವರ ಡೆಲಿವರಿ ಸಮಯದಲ್ಲಿ ಆದ ಖರ್ಚನ್ನು ಸಹ 1ನೇ ಆರೋಪಿಯೇ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ತೊಂದರೆ ಕೊಡದೆ ಇದ್ದರೂ ಹಾಗೂ ಯಾವುದೇ ಘಟನೆ ನಡೆಯದೆ ಇದ್ದರೂ ಚಾಸಾ-1 ರವರೇ ಮನೆಯನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಗಳು ರೂಪಾಯಿ 5 ಲಕ್ಷ ಹಣವನ್ನು ಕೇಳಿರುವುದಿಲ್ಲ ಹಾಗೂ ನೀವು ಅವರಿಗೆ ರೂಪಾಯಿ 2 ಲಕ್ಷ ಹಣವನ್ನು ಮತ್ತು ಒಡವೆಯನ್ನು ಕೊಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗಳು ಚಾಸಾ-1 ರವರಿಗೆ ಹಿಂಸೆ ನೀಡಿರುವುದಿಲ್ಲ ಹಾಗೂ ಹಲ್ಲೆ ಮಾಡಿರುವುದಿಲ್ಲ ಮತ್ತು ಚಾಸಾ-1 ರವರ ಡೆಬಿಟ್ ಕಾರ್ಡುಗಳನ್ನು ದುರಪಯೋಗಪಡಿಸಿಕೊಂಡಿರುವುದಿಲ್ಲ ಎಲ್ಲಾ ಕಟ್ಟು ಕತೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಮಗು ಜನಿಸಿದ ನಂತರ ಚಾಸಾ-1 ರವರು ಬೆಂಗಳೂರಿಗೆ ಹೋಗಿರುತ್ತಾರಾ ಎಂದರೆ ಸಾಕ್ಷಿ ನಾಮಕರಣದ ನಂತರ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಸಮಯ ಇದ್ದರು ಎಂದರೆ ಸಾಕ್ಷಿ 2 ತಿಂಗಳು ಇದ್ದರು ಎಂದು ನುಡಿಯುತ್ತಾರೆ. ಚಾಸಾ-1ರವರ ಆರೋಗ್ಯ ಸರಿ ಇಲ್ಲದೆ ಇದ್ದಾಗ 1ನೇ ಆರೋಪಿಯೇ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಮತ್ತು ಚಾಸಾ-1 ರವರು

ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಕೊಟ್ಟು ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

1ನೇ ಆರೋಪಿಗೆ ಕಂಪೆನಿ ಇತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯ ಕಂಪೆನಿ ನಷ್ಟ ಅನುಭವಿಸಿದ ಕಾರಣ ಚಾಸಾ-1 ರವರ ಬೇಡಿಕೆಯನ್ನು ಪೂರೈಸದ ಕಾರಣ ಚಾಸಾ-1 ರವರೇ ಆರೋಪಿಯ ಮನೆಯನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿ ಚಾಸಾ-1 ರವರಿಗೆ ಸಂಬಂಧಪಟ್ಟ ಚೆಕ್ಕನ್ನು ದುರಪಯೋಗಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರವರು 1ನೇ ಆರೋಪಿಗೆ ವಿವಾಹ ವಿಚ್ಛೇಧನೆ ಕೊಡಬೇಕೆಂಬ ಉದ್ದೇಶದಿಂದ ಹಾಗೂ ಅದಕ್ಕೆ 1ನೇ ಆರೋಪಿ ಒಪ್ಪದೆ ಇದ್ದ ಕಾರಣ ವಿವಾಹ ವಿಚೇಧನೆಯನ್ನು ಪಡೆಯಲು ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಚಾಸಾ-1 ರವರು ಇದೇ ರೀತಿ ಸಾಕ್ಷಿ ಹೇಳಿ ಎಂದು ಹೇಳಿದ ಮೇರೆಗೆ ನೀವು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳ ವಿರುದ್ದ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಹಲ್ಲೆಯ ಸಂಬಂಂಧ ಚಿಕಿತ್ಸೆ ಪಡೆದಿರುತ್ತಾರಾ ಎಂದರೆ ಸಾಕ್ಷಿ ಚಿಕಿತ್ಸೆ ಪಡೆಯುವಷ್ಟು ಪೆಟ್ಟಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಶ್ರೀನಿವಾಸ ಕೆ.ಆರ್)**
**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**